## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಎಂವೈಎಸ್\1164\2017\ಸನಿಕಾಸ-1 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:16/10/2017

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀಮತಿ.ಭಾರತಿ ಕೋಂ ಶಿವರಾಮು, ವಾರ್ಡ್ ನಂ.26, ವಿಪಿ ಬೋರೆ, ಹುಣಸೂರು, ಮೈಸೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಮೈಸೂರು ಜಿಲ್ಲೆ ಹುಣಸೂರು ವಿಪಿ ಬೋರೆ ವಾರ್ಡ್ ನಂ.26 ಚೌಡೇಶ್ವರಿ ನಿಲಯ ರತ್ನಪುರಿ ಮುಖ್ಯ ರಸ್ತೆ ನಂ.84ರ ನಿವಾಸಿಯಾದ ಶ್ರೀಮತಿ.ಭಾರತಿ ಕೋಂ ಶಿವರಾಮು (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕ್ ಪುರಸಭೆಯ ಆಯುಕ್ತರು (ಇನ್ನು ಮುಂದೆ "ಎದುರುದಾರ" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಮೈಸೂರು ಜಿಲ್ಲೆ ಹುಣಸೂರು ಪಟ್ಟಣ ವಾರ್ಡ್ ನಂ.26ರ ತಮ್ಮ ಮನೆಯ ಮುಂಭಾಗದಲ್ಲಿ ಅಕ್ರಮವಾಗಿ ಪರವಾನಗಿ ಪಡೆಯದೇ ಶ್ರೀ.ಕೃಷ್ಣಪ್ಪ ಎಂಬುವವರು ಮಟನ್ ಸ್ಟಾಲ್ ಅಂಗಡಿಯನ್ನು ಮತ್ತು ಶ್ರೀ.ರಘು ಎಂಬುವವರು ಚಿಕನ್ ಸ್ಟಾಲ್ ಅಂಗಡಿ ನಡೆಸುತ್ತಿದ್ದು, ಇದರಿಂದ ತಮ್ಮ ಮನೆಗೆ ತೊಂದರೆಯಾಗುತ್ತಿದೆ ಹಾಗೂ ಸದರಿ ಅಂಗಡಿಯಿಂದ ಬಿಸಾಡಿದ ತ್ಯಾಜ್ಯವನ್ನು ನಾಯಿಗಳು ತಂದು ನೀರಿನ ಟ್ಯಾಂಕ್ ಮೇಲೆ ಹಾಕಿದ ಕಾರಣ, ನೀರು ಕಲುಷಿತಗೊಂಡು ತಮ್ಮ ಆರೋಗ್ಯದ ಮೇಲೆ ತೀವ್ರ ಪರಿಣಾಮ ಬೀರುತ್ತಿದೆ. ಸದರಿ ಅಂಗಡಿಯನ್ನು ತೆರವುಗೊಳಿಸುವ ಬಗ್ಗೆ ಕೋರಿದ್ದು, ಎದುರುದಾರರು ತಾತ್ಕಾಲಿಕವಾಗಿ ತೆರವುಗೊಳಿಸಿ ಮತ್ತೆ ಕಾನೂನು ಬಾಹಿರವಾಗಿ ಸದರಿ ಅಂಗಡಿಗಳನ್ನು ನಡೆಸುತ್ತಿರುತ್ತಾರೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-

ಸದರಿ ಮಾಂಸದ ಅಂಗಡಿಯನ್ನು ಶ್ರೀ.ಗಿರೀಶ್ ಎಂಬುವವರು ತಮ್ಮ ತಂದೆಯ ಕಾಲದಿಂದಲೂ ಸಹ ನಗರಸಭೆಗೆ ನಿಗಧಿತ ಶುಲ್ಕ ಪಾವತಿಸಿ 2011–12ನೇ ಸಾಲಿನಿಂದ 2017–18ನೇ ಸಾಲಿನವರೆಗೆ ಉದ್ದಿಮೆ ಪರವಾನಗಿಗಾಗಿ ಅರ್ಜಿ ಸಲ್ಲಿಸಿದ್ದಾರೆ. ಅಲ್ಲದೇ, ಕಂದಾಯವನ್ನು ಸಹ ಪಾವತಿಸುತ್ತಾ ಬಂದಿದ್ದಾರೆ. ಸದರಿಯವರು ಮಾಂಸ ಮಾರಾಟ ಮಾಡುವ ಕುಲ ಕಸುಬಾಗಿದ್ದು, ಜೀವನಾಧಾರಕ್ಕೆ ಬೇರೆ ಮಾರ್ಗವಿಲ್ಲದಿರುವುದರಿಂದ, ನಗರಸಭೆಯ ಸೂಚನೆಯಂತೆ ಸ್ವಚ್ಛತೆ ಕಾಪಾಡಿಕೊಂಡು ಸೂಕ್ತ ರೀತಿಯಲ್ಲಿ ಮಾಂಸ ಮಾರಾಟದ ತ್ಯಾಜ್ಯವನ್ನು ವಾಹನಗಳಲ್ಲಿ ವಿಲೇವಾರಿ ಮಾಡಿ, ಸ್ವಚ್ಛತೆ ಕಾಪಾಡುವಂತೆ ನಿರ್ದೇಶನ ನೀಡಿದೆ. ಈ ಬಗ್ಗೆ ನಗರಸಭೆ ಕೌನ್ಸಿಲ್‌ನಲ್ಲಿಯೂ ಸಹ ತೀರ್ಮಾನವಾಗಿದೆಯೆಂದು ಹೇಳಿದ್ದಾರೆ.

4. ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ತಾವು ಎದುರುದಾರರಿಗೆ ನೀಡಿದ ಮನವಿಗೆ ಸಂಬಂಧಪಟ್ಟಂತೆ ಎದುರುದಾರರು ತಕ್ಷಣ ಕ್ರಮ ಕೈಗೊಂಡು ಸದರಿ ಅಂಗಡಿಯನ್ನು ಮುಚ್ಚಿದ್ದು, ಆ ನಂತರ ಸದರಿ ಅಂಗಡಿಯ ಮಾಲೀಕರ ಜೊತೆ ಷಾಮೀಲಾಗಿ ಲಂಚದ ಹಣ ಪಡೆದು ಮುಚ್ಚಿರುವ ಅಂಗಡಿಯನ್ನು ಪುನಃ ತೆಗೆಸಿ ವ್ಯಾಪಾರ ಮಾಡಲು ಅನುವು ಮಾಡಿಕೊಟ್ಟಿರುವುದಾಗಿ ಹೇಳಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಸದರಿ ಅಂಗಡಿಯನ್ನು ಶ್ರೀ.ಗಿರೀಶ್ ಎಂಬುವವರು ಅಧಿಕೃತವಾಗಿ ಎದುರುದಾರರಿಂದ ಪರವಾನಗಿ ಪಡೆದು ಸೂಕ್ತ ತೆರಿಗೆಯನ್ನು ಪಾವತಿಸಿ, ಮಟನ್ ಅಂಗಡಿಯನ್ನು ನಡೆಸುತ್ತಿರುವುದು ಕಂಡು ಬಂದಿದೆ. ಈ ಬಗ್ಗೆ ಹುಣಸೂರು ನಗರಸಭೆಯಲ್ಲೂ ಸಹ ಸ್ವಚ್ಛತೆ ಕಾಪಾಡಿಕೊಂಡು ಹೋಗುವ ಷರತ್ತಿಗೊಳಪಟ್ಟು ಪರವಾನಗಿ ನೀಡಲು ಸಭೆ ತೀರ್ಮಾನಿಸಿದೆ. ಅದರಂತೆ, 2011–12 ರಿಂದ ಇಲ್ಲಿಯವರೆಗೂ ಸಹ ಸದರಿ ಉದ್ದಿಮೆಯನ್ನು ನಡೆಸುತ್ತಿರುವುದು ಕಂಡು ಬಂದಿದೆ. ಸದರಿ ಉದ್ದಿಮೆಯಿಂದ ತೊಂದರೆಯಾಗುತ್ತಿರುವ ಬಗ್ಗೆ ದೂರುದಾರರು ಎದುರುದಾರರಿಗೆ ಅರ್ಜಿ ಸಲ್ಲಿಸಿದ್ದು, ಆ ಸಂದರ್ಭದಲ್ಲಿ ಎದುರುದಾರರು ಸ್ಥಳ ಪರಿಶೀಲನೆ ಮಾಡಿ, ಸದರಿ ಮಾಂಸದ ಅಂಗಡಿಯಿಂದ ತೊಂದರೆಯಾಗುತ್ತಿರುವ ಬಗ್ಗೆ ಪರಿಶೀಲಿಸಿ ಸದರಿ ಅಂಗಡಿಯನ್ನು ಮುಚ್ಚಿರುವುದು ಕಂಡು ಬಂದಿದೆ. ದೂರುದಾರರು ಹುಣಸೂರು ಉಪವಿಭಾಗಾಧಿಕಾರಿಗಳು ಮತ್ತು ಜಿಲ್ಲಾಧಿಕಾರಿಗಳು ಹಾಗೂ ಜಂಟಿ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರಿಗೆ ಅರ್ಜಿ ಸಲ್ಲಿಸಿದ್ದು, ಸದರಿಯವರು ಸ್ಥಳ ಪರಿಶೀಲನೆ ಮಾಡಿ, ಸದರಿ ಅಂಗಡಿಯನ್ನು ಮುಚ್ಚುವ ಬಗ್ಗೆ ನಿರ್ದೇಶನ ನೀಡಿದ್ದಾರೆ. ಅದರಂತೆ, ಎದುರುದಾರರು ಸದರಿ ಅಂಗಡಿಯನ್ನು ಮುಚ್ಚಿರುವುದು ಕಂಡು ಬಂದಿದೆ. ಪುನಃ ಸದರಿ ಅಂಗಡಿಯ ಮಾಲೀಕರು ಅಂಗಡಿಯನ್ನು ಪ್ರಾರಂಭಿಸಿರುವುದಾಗಿ ದೂರುದಾರರು ಹೇಳಿದ್ದಾರೆ. ಈ ಬಗ್ಗೆ ಇರುವ ಫೋಟೋ ನಕಲು ಪ್ರತಿಯನ್ವಯ ಸದರಿ ಅಂಗಡಿ ಪುನಃ ತೆರೆದಿರುವುದು ಕಂಡು ಬಂದಿದೆ. ಸದರಿ

ಅಂಗಡಿಯ ಮಾಲೀಕರು ಹುಣಸೂರು ನಗರಸಭೆಯ ಸಾಮಾನ್ಯ ಸಭೆಯ ನಿರ್ಣಯದಂತೆ ನಿಗಧಿತ ತೆರಿಗೆಯನ್ನು ಪಾವತಿಸಿ, ಉದ್ದಿಮೆ ನಡೆಸಲು ಪರವಾನಗಿ ಪಡೆದಿರುವುದು ಕಂಡು ಬಂದಿದೆ.

6. ಆದ್ದರಿಂದ, ಸದರಿ ಅಂಗಡಿಯಿಂದ ದೂರುದಾರರು ಹಾಗೂ ಸಾರ್ವಜನಿಕರಿಗೆ ತೊಂದರೆ ಉಂಟಾಗುತ್ತಿರುವ ಬಗ್ಗೆ ಈಗಾಗಲೇ ಹಲವಾರು ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿರುವುದರಿಂದ, ಸದರಿ ಅಂಗಡಿಯನ್ನು ಆ ಸ್ಥಳದಿಂದ ಬೇರೆ ಸ್ಥಳಕ್ಕೆ ವರ್ಗಾಯಿಸಿ, ಸಾರ್ವಜನಿಕ ವಾಸಕ್ಕೆ ಅನುವು ಮಾಡಿಕೊಡುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 16.10.17.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**